सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

25ನೇ ಜನವರಿ, 2016

**ಡಾ: ಪರಮೇಶ್ವರ್ ರವರೇ,**

ಕೋರಮಂಗಲದಂತಹ ಹಳೆಯ ಜನವಸತಿ ಸ್ಥಳಗಳಲ್ಲಿ ಸಾರಿಗೆ ದಟ್ಟನೆಯ ನಿರ್ವಹಣೆಯಿಂದಾಗುತ್ತಿರುವ ಪರಿಣಾಮವನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ಈ ಪತ್ರ ಬರೆಯುತ್ತಿದ್ದೇನೆ. ನಾನು ಈ ಮುಂಚೆ ಶ್ರೀ ಸಲೀಂ, ಹೆಚ್ಚುವರಿ ಪೊಲೀಸ್ ಆಯುಕ್ತರು (ಸಂಚಾರ), ರವರ ಗಮನಕ್ಕೆ ತರುವ ಮೂಲಕ ಅವರು ಪರಿಚಯಿಸಿದ ಹೊಸ ಸಾರಿಗೆ ನಿರ್ವಹಣಾ ನಿಯಮಗಳು ಎಷ್ಟು ಹಾನಿಕಾರಕವಾಗಿವೆ ಮತ್ತು ಇಲ್ಲಿ ವಾಸವಾಗಿರುವ ಅನೇಕ ಕುಟುಂಬಗಳ ಸುರಕ್ಷತೆಗೆ ಧಕ್ಕೆಯುಂಟು ಮಾಡುವಂತಿವೆ ಎಂಬುದಾಗಿ ತಿಳಿಸಿರುತ್ತೇನೆ.

ಕೋರಮಂಗಲದ ಸ್ಥಳೀಯ ನಿವಾಸಿಗಳೊಂದಿಗೆ ಚರ್ಚಿಸಿ, ಅವರ ಸಲಹೆ ಸೂಚನೆ ಪಡೆಯದೇ ಬಹುಪಯೋಗಿ ವಾಹನಗಳು, ಕ್ಯಾಬ್‌ಗಳು, ಕಾರುಗಳು ಮತ್ತು ದ್ವಿಚಕ್ರ ವಾಹನಗಳು ಚಲಿಸುವುದಕ್ಕಾಗಿ ಬದಲಿ ಮಾರ್ಗಗಳನ್ನು ಸೃಷ್ಟಿಸಿರುವುದರಿಂದ ಸ್ಥಳೀಯರು ವಾಸವಾಗಿರುವ ಸ್ಥಳಗಳ ಮೂಲಕ ಹರಿದು ಹೋಗುವ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು, ಇಲ್ಲಿನ ನಿವಾಸಿಗಳ ಅದರಲ್ಲೂ ಮುಖ್ಯವಾಗಿ ಚಿಕ್ಕಮಕ್ಕಳ, ಮಹಿಳೆಯರ ಮತ್ತು ಹಿರಿಯ ನಾಗರಿಕರ ಸುರಕ್ಷತೆ ಅಪಾಯಕ್ಕೆ ಸಿಲುಕಿದ್ದು, ಅವರೆಲ್ಲ ಮುಕ್ತವಾಗಿ ಮತ್ತು ನಿರ್ಭೀತರಾಗಿ ಓಡಾಡುವುದು ಅಸಾಧ್ಯವಾಗಿಬಿಟ್ಟಿರುತ್ತದೆ. ಈ ವಿಷಯವಾಗಿ ಸಾರ್ವಜನಿಕರು ನನಗೆ ಸಾಕಷ್ಟು ಲಿಖಿತ ದೂರುಗಳನ್ನು ಸಲ್ಲಿಸಿರುತ್ತಾರೆ. ಹೀಗೆ ಶಾಂತಿಯುತ ಜನವಸತಿ ಪ್ರದೇಶಗಳ ನೆಮ್ಮದಿಯನ್ನು ಕದಡುವುದು ಸ್ವೀಕಾರಾರ್ಹವಲ್ಲ ಮತ್ತು ಇಂತಹ ಕೃತ್ಯಗಳನ್ನು ಕೂಡಲೇ ತಡೆಯಬೇಕು.

ಹೊಸೂರು ಮತ್ತು ಸರ್ಜಾಪುರ ರಸ್ತೆಗಳ ಸಾರಿಗೆ ದಟ್ಟನೆ ಸಮಸ್ಯೆಯನ್ನು ಬಗೆ ಹರಿಸುವ ಉದ್ದೇಶದಿಂದ, ಆ ರಸ್ತೆಗಳಲ್ಲಿ ಓಡಾಡುವ ವಾಹನಗಳನ್ನು ಹೀಗೆ ಜನವಸತಿ ಪ್ರದೇಶಗಳ ಮೂಲಕ ಸಂಚರಿಸುವಂತೆ ಮಾಡುವುದು ಸೂಕ್ತ ಪರಿಹಾರವಲ್ಲ ಮತ್ತು ಇದರಿಂದ ಸಾರಿಗೆ ದಟ್ಟನೆಯ ಸಮಸ್ಯೆ ನೀಗುತ್ತದೆ ಎಂಬುದು ತಪ್ಪು ಕಲ್ಪನೆ. ಇಲ್ಲಿ ವಾಸವಾಗಿರುವ ಚಿಕ್ಕಮಕ್ಕಳ, ಹಿರಿಯರ ಮತ್ತು ಕುಟುಂಬ ಸದಸ್ಯರ ಜೀವನ ಸುರಕ್ಷತೆಯ ಬಗ್ಗೆ ಕಿಂಚಿತ್ತೂ ಕಾಳಜಿ ತೋರದೇ ಎರ್ರಾಬಿರ್ರಿಯಾಗಿ ವಾಹನಗಳು ಸಂಚರಿಸಲು ಅವಕಾಶ ಮಾಡಿಕೊಟ್ಟಿರುವುದನ್ನು ನೋಡಿದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರಾಮಾಣಿಕ ತೆರಿಗೆದಾರರ ಬಗ್ಗೆ ಎಷ್ಟು ನಿಷ್ಕಾಳಜಿ ಇದೆ ಎಂಬುದು ಸ್ಪಷ್ಟವಾಗುತ್ತದೆ.

ಇಂತಹ ಅವ್ಯವಸ್ಥೆಯಿಂದಾಗಿ ದುರಂತಗಳು ಸಂಭವಿಸುವುದರಲ್ಲಿ ಎರಡು ಮಾತಿಲ್ಲ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೋಸ್ಕರ ಈ ಪತ್ರ ಬರೆಯುತ್ತಿದ್ದೇನೆ – ಅಂತಹ ದುರಂತಗಳು ಸಂಭವಿಸದಿರಲಿ ಎಂದು ಪ್ರಾರ್ಥಿಸುತ್ತೇನೆ, ಆದರೆ ಸದ್ಯದ ಪರಿಸ್ಥಿತಿ ನೋಡಿದರೆ ಅಂತಹ ದುರಂತ ಯಾವಾಗ ಬೇಕಾದರೂ ಸಂಭವಿಸುವ ಸಾಧ್ಯತೆಯಿದೆ. ಈ ಬಗ್ಗೆ ಸೂಕ್ತ ಮತ್ತು ತುರ್ತು ಕ್ರಮ ತೆಗೆದುಕೊಳ್ಳದಿದ್ದಲ್ಲಿ, ತಮ್ಮ ಸರ್ಕಾರವನ್ನು ಹೊಣೆಯಾಗಿಸಲಾಗುವುದು.



11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

सत्यमेव जयते

ನಗರ ವಾಸಿಗಳ ಸುರಕ್ಷತೆ, ನಗರದ ಕಾನೂನು ಮತ್ತು ನಿಯಮಗಳಿಗೆ ಸರ್ಕಾರ ಮತ್ತು ಆಡಳಿತಾತ್ಮಕ ಇಲಾಖೆಗಳನ್ನೇ ಹೊಣೆಯಾಗಿಸಬೇಕು ಎಂಬ ಬೇಡಿಕೆ ನಗರ ವಾಸಿಗಳಲ್ಲಿ ಆಗಾಗ ಪ್ರತಿಧ್ವನಿಸುತ್ತಿರುತ್ತದೆ. ಸಂಚಾರಿ ಪೊಲೀಸ್ ಇಲಾಖೆಯ ಇತ್ತೀಚಿನ ನಿರ್ಧಾರಗಳಿಂದಾಗಿ ಇಂತಹ ಬೇಡಿಕೆಗಳು ಇಮ್ಮಡಿಗೊಂಡಿದ್ದು, ಸಂಬಂಧಪಟ್ಟ ಅಧಿಕಾರಿಗಳ ತಾತ್ಕಾಲಿಕ, ಅವ್ಯವಸ್ಥಿತ ಯೋಜನೆಗಳಿಂದಾಗಿ ಸಾರ್ವಜನಿಕರ ಸುರಕ್ಷತೆ ಮತ್ತು ಜೀವಗಳಿಗೆ ಧಕ್ಕೆಯಾದರೆ, ಅಂತಹ ಅಧಿಕಾರಿಗಳನ್ನು ಹೊಣೆಯಾಗಿಸಿ, ಅವರ ವಿರುದ್ಧ ತಕ್ಕ ಕ್ರಮ ತೆಗೆದುಕೊಳ್ಳುವಂತೆ ಮಾಡಲು ನಾನು ಹಿಂಜರಿಯುವುದಿಲ್ಲ.

ಸಾರಿಗೆ ದಟ್ಟನೆಯ ಸಮಸ್ಯೆಯನ್ನು ಪರಿಹರಿಸುತ್ತೇವೆಂದು ಹೇಳಿ ವಾಹನಗಳನ್ನೆಲ್ಲ ಸ್ಥಳೀಯ ನಿವಾಸಿಗಳ ಪ್ರದೇಶಗಳ ಮೂಲಕ ಹಾಯ್ದು ಹೋಗುವಂತೆ ಮಾಡಿ, ಗೊಂದಲವುಂಟು ಮಾಡುವುದು ಮತ್ತು ಸ್ಥಳೀಯರ ಜೀವಕ್ಕೆ ಅಪಾಯವನ್ನುಂಟು ಮಾಡುವ ಬದಲು, ಸೂಕ್ತ ಬದಲಿ ಉಪಾಯಗಳನ್ನು ಹುಡುಕುವುದು ಲೇಸು. ಸಂಚಾರಿ ಪೊಲೀಸ್ ಇಲಾಖೆ ಈಗ ಹುಡುಕಿರುವ ಪರಿಹಾರಗಳೇನಿದ್ದರೂ ತಾತ್ಕಾಲಿಕ ಅಷ್ಟೆ. ಅವುಗಳಿಂದ ಸಾರಿಗೆ ಸಮಸ್ಯೆ ಬಗೆ ಹರಿಯುವ ಬದಲು ಸ್ಥಳೀಯರ ಜೀವನ ದುಸ್ಥರವಾಗುತ್ತದೆ.

ಇತ್ತೀಚಿನ ನಿರ್ಧಾರಗಳನ್ನು ಪರಿಶೀಲಿಸುವುದಕ್ಕಾಗಿ ತಾವು ಈ ಪತ್ರವನ್ನು ಬಳಸಿಕೊಳ್ಳುವಿರಿ ಮತ್ತು ಕೋರಮಂಗಲ ಹಾಗೂ ಇತರ ವಸತಿ ಪ್ರದೇಶಗಳಲ್ಲಿ ಸಂಚಾರ ದಟ್ಟನೆ ನಿಲ್ಲಿಸುವಿರಿ ಎಂದು ನಂಬಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಡಾ: ಜಿ ಪರಮೇಶ್ವರ್**
ಮಾನ್ಯ ಗೃಹ ಸಚಿವರು
ಕರ್ನಾಟಕ ಸರ್ಕಾರ
ವಿಕಾಸ ಸೌಧ, ಬೆಂಗಳೂರು

**<u>ಪ್ರತಿ:-</u>**
1) ಶ್ರೀ ಕೆ ಜೆ ಜಾರ್ಜ್, ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು
2) ಶ್ರೀ ಎಂ ಎ ಸಲೀಂ, ಭಾಪೋಸೇ, ಹೆಚ್ಚುವರಿ ಪೋಲೀಸ್ ಆಯುಕ್ತರು (ಸಂಚಾರ), ಬೆಂಗಳೂರು ನಗರ, ಬೆಂಗಳೂರು